ಹುಣಸೂರಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಬಗ್ಗೆ

1487. ಶ್ರೀ ಎಸ್.ಚಿಕ್ಕಮಾದು (ಹುಣಸೂರು) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸರ್ಕಾರವು ಹುಣಸೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ತನ್ನ ವಶಕ್ಕೆ ತೆಗೆದುಕೊಂಡಿರುವುದು ನಿಜವೆ?

ಆ) ಬೆಳೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಈಗಿರುವ ಸ್ಥಳಾವಕಾಶವು ಸಾಲದಾಗಿದೆ ಎಂಬ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈಗಿರುವ ಸ್ಥಳಾವಕಾಶವನ್ನು ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) –

ಅ) ನಿಜ

ಆ) ಬಂದಿದೆ

ಇ) ಯಾವ ಕ್ರಮ ಕೈಗೊಂಡಿಲ್ಲ

ಹಳಿಯಾಳ ಹಾಗೂ ಅಂಕೋಲಾ ಬಸ್ ನಿಲ್ದಾಣಕ್ಕೆ ಕವರ್ಡ್ ಅಕಾಮಡೇಶನ್ ಮಂಜೂರಾತಿ

1510. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಹಾಗೂ ಅಂಕೋಲ ಬಸ್ ನಿಲ್ದಾಣಗಳಿಗೆ ಆವರಿತ ಜಾಗ (ಕವರ್ಡ್ ಅಕಾಮಡೇಶನ್) ಮಂಜೂರಾಗಿರುವುದು ನಿಜವೆ?

ಆ) ಹಾಗಿದ್ದಲ್ಲಿ ಅದಕ್ಕೆ ಎಂದು ಮಂಜೂರಾತಿ ದೊರೆಯಿತು.

ಇ) ಮಂಜೂರಾಗಿ ಹಲವಾರು ತಿಂಗಳುಗಳಾದರೂ ಇದುವರೆವಿಗೂ ಕೆಲಸ ಪ್ರಾರಂಭಿಸದಿರಲು ಕಾರಣಗಳೇನು?

ಈ) ಸಾರ್ವಜನಿಕರ ಹಿತದೃಷ್ಟಿಯಿಂದ ಆದಷ್ಟು ಬೇಗ ಕೆಲಸ ಪ್ರಾರಂಭಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವುದೇ?

ಉ) ಇವುಗಳಿಗೆ ತಗಲುವ ವೆಚ್ಚ ವೆಷ್ಟು? (ಹಳಿಯಾಳ ಮತ್ತು ಅಂಕೊಲದ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು)

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) –

ಅ) ಹೌದು

ಆ) 5.11.90 ರಂದು ಮಂಜೂರಾತಿ ದೊರೆಯಿತು.

ಇ) 2 ಕೆಲಸಗಳಿಗೆ ಮೊದಲನೇ ಬಾರಿಗೆ ಟೆಂಡರ್ ಕರೆದಾಗ ಯಾವ ಗುತ್ತಿಗೆದಾರರು ಟೆಂಡರಿನಲ್ಲಿ ಪಾಲ್ಗೊಳ್ಳಲಿಲ್ಲ. ಎರಡನೇ ಬಾರಿಗೆ ಅಂಕೋಲ ಕೆಲಸಕ್ಕೆ ಯಾವ ಗುತ್ತಿಗೆದಾರರು ಬಂದಿರುವುದಿಲ್ಲ. ಹಳಿಯಾಳಕ್ಕೆ ಹೆಚ್ಚಿನ ದರ ನಮೂದಿಸಿದ್ದರಿಂದ ಟೆಂಡರನ್ನು ರದ್ದುಪಡಿಸಲಾಯಿತು. ಪುನಃ ಈ ಕೆಲಸಗಳಿಗೆ ಟೆಂಡರ್ ಕರೆದಾಗ ಇದಕ್ಕೂ ಯಾವ ಗುತ್ತಿಗೆದಾರರು ಬರಲಿಲ್ಲ. ಆದಕಾರಣ, ಈ ಕೆಲಸವನ್ನು ತುಂಡು ಪದ್ಧತಿಯ ಮೇಲೆ ಕೊಡಲು ಪ್ರಸ್ತಾವನೆಯಲ್ಲಿ ಇದೆ.

ಈ) ಆದಷ್ಟು ಬೇಗನೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಉ) ಹಳಿಯಾಳಕ್ಕೆ 5.00 ಲಕ್ಷ
ಅಂಕೋಲಕ್ಕೆ 5.00 ಲಕ್ಷ ರೂ.ಗಳು.